ಕೋಸ್ಕರ ದೂರು ಕೊಟ್ಟರು ಎಂದು ಹೇಳಿದರು ನಾನು ಉತ್ತರವನ್ನು ಸರಿಯಾಗಿ ಕೊಟ್ಟಿದ್ದೇನೆ. ಸರಿಯಾದ ಉತ್ತರ ಇಲ್ಲದೆ ಇರುವುದರಿಂದ ಅವರನ್ನು ದಸ ಗಿರಿ ಮಾಡಿಲ್ಲ, ಕ್ರಮ ತೆಗೆದುಕೊಂಡಿಲ್ಲ ಮೆದು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು ಇವತ್ತು ತೆಗೆದುಕೊಳ್ಳಬಹುದು ಅಥವಾ ನಾಳೆ ತೆಗೆದು ಕೊಳ್ಳಬಹುದು ಎನ್ನುವುದು ಅವರಿಗೆ ಅನುಮಾನ ಇದೆ ಆ ಅನುಮಾನ ಅವರಿಗೆ ಬೇಡ.

ಶ್ರೀ ಆರ್, ರಾಮಯ್ಯ,—ಮಾನ್ಯ ಅಧ್ಯಕ್ಷರೆ ಮಾನ್ಯ ಸಾರಿಗೆ ಮಂತ್ರಿಗಳು ಇಲ್ಲಿಯೇ ಇದ್ದಾರೆ. ಅವರಲ್ಲಿ ಒಂದು ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ ಬಸ್ಸುಗಳನ್ನು ಹೋಟೆಲ್ ಹತ್ತಿರ ಬಾರ್ ಇರತಕ್ಕಂಥ ಕಡೆ ನಿಲ್ಲಿಸಬಾರದೆಂದು ಸಾಕಷ್ಟು ಮನವಿಗಳನ್ನು ಕೊಟ್ಟಿದ್ದರೂ ಸಹ ಬಸ್ಸುಗಳನ್ನು ಹೋಟೆಲ್ ಹತ್ತಿರವೇ ಏತಕ್ಕೆ ತೆಗೆದುಕೊಂಡು ಹೋಗಿ ನಿಲ್ಲಿಸಬೇಕು ಇದನ್ನು ಏತಕ್ಕೆ ಹೇಳುತ್ತಿದ್ದೇ ನೆಂದರೆ ಬಸ್ಸನ್ನು ಹೋಟಲ್ ಹತ್ತಿರ ತೆಗೆದುಕೊಂಡು ಹೋಗಿ ನಿಲ್ಲಿಸಿದ್ದರಿಂದಲೆ ಇದು ಆಗಿರುವುದು, ಮಾನ್ಯ ಮಂತ್ರಿಗಳು ನಮ್ಮ ಬಸ್ ನಿಲ್ದಾಣ ಎಲ್ಲಿದೆ ಅಲ್ಲಿ ಇಲ್ಲಿಸಬೇಕೆಂದು ಹೇಳಬೇಕು.

ಅಧ್ಯಕ್ಷರು —ಮಾನ್ಯ ಸದಸ್ಯರು ಇದನ್ನೆಲ್ಲ ಡಿಮ್ಯಾಂಡ್ ಬೇಲೆ ಮಾತನಾಡುವಾಗ ಹೇಳಬೇಕು ಈಗ ದಯಮಾಡಿ ತಾವು ಕುಳಿತುಕೊಳ್ಳಬೇಕು.

೪) ಕೆ.ಜಿ.ಎಫ್.ನಲ್ಲಿ ಪಡಿತರ ವಿತರಣೆಯಲ್ಲಿನ ಪ್ರಮಾಣವನ್ನು ಕಡಿಮೆ ಮಾಡಿರುವುದು

ಶ್ರೀ ಆರ್, ವೆಂಕಟರಾಮಯ್ಯ—(ಮಾನ್ಯ ಶ್ರೀ ಟಿ.ಎಸ್. ಮಣಿ ಅವರ ಪರವಾಗಿ) ಮಾನ್ಯ ಅಧ್ಯಕ್ಷರೆ ಆಹಾರ ಪಡಿತರ ವಿತರಣೆಯಲ್ಲಿನ ಪ್ರಮಾಣವನ್ನು ಕೆ.ಜಿ.ಎಫ್.ನಲ್ಲಿ ಕಡಿಮೆಗೊಳಿಸಿರುವುದರ ಬಗ್ಗೆ ಬೆಂಗಳೂರಿನಲ್ಲಿ ಆಹಾರ ಪಡಿತರವನ್ನು ವಿತರಿಸುವ ಪ್ರಮಾಣದಲ್ಲೇ ಕೆ.ಜಿ.ಎಫ್‌ನಲ್ಲೂ ವಿತರಿಸುವ ಬಗ್ಗೆ ಆಹಾರ ಮಂತ್ರಿ, ನಾಗರೀಕ ಸರಬರಾಜು ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ ಅನ್ವರಿ.—(ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಮಂತ್ರಿಯವರು).

ಕೇಂದ್ರ ಸರ್ಕಾರವು ಕಳೆದ ಏಪ್ರಿಲ್ ೧೯೮೭ ರಿಂದ ಜನವರಿ ೧೯೮೮ ರವರೆವಿಗೆ ೬೦,೦೦೦ ಮೆ ಟನ್ ಅಕ್ಕಿ ಹಾಗೂ ೨೫,೦೦೦ ಮೆ. ಟನ್ ಗೋಧಿಯನ್ನು ರಾಜ್ಯ ಸರ್ಕಾರದ ಸಾರ್ವಜನಿಕರ ವಿತರಣೆಗಾಗಿ ನೀಡುತ್ತಿತ್ತು. ಆದರೆ, ಕೇಂದ್ರ ಸರ್ಕಾರವು ಫೆಬ್ರುವರಿ ೧೯೮೮ ರಿಂದ ಮೇ ೧೯೮೮ ರವರೆವಿಗೆ ಬಿಡುಗಡೆ ಮಾಡಿದ ಅಕ್ಕಿಯ ಪ್ರಮಾಣವನ್ನು ೬೦,೦೦೦ ಮೆ. ಟನ್ ನಿಂದ ೫೫,೦೦೦ ಮೆ. ಟನ್‌ಗೆ ಇಳಿಸಿದೆ ಅಲ್ಲದೆ, ಪುನಃ ಜೂನ್ ೧೮೮೯ ಕ್ಕೆ ೪೫,೦೦೦ ಮೆ. ಟನ್‌ಗೆ ಇಳಿಸಿದೆ.

ಇದೇ ರೀತಿ ಗೋಧಿಯ ಪ್ರಮಾಣವನ್ನು ಸಹ ೨೫,೦೦೦ ಟನ್‌ನಿಂದ ಮಾರ್ಚ್ ತಿಂಗಳಿನಲ್ಲಿ ೨೦,೦೦೦ ಮೆ. ಟನ್‌ಗೂ ಹಾಗೂ ಏಪ್ರಿಲ್‌ನಿಂದ ಜೂನ್‌ವರೆವಿಗೆ ೧೫,೦೦೦ ಮೆ. ಟನ್‌ಗೆ ಕಡಿಮೆ ಮಾಡಿದೆ. ರಾಜ್ಯಕ್ಕೆ ನೀಡಲಾದ ಹಂಚಿಕೆ ಕಡಿಮೆ ಮಾಡಿರುವುದರಿಂದ ಜಿಲ್ಲಾವಾರು ಹಂಚಿಕೆಯ ಪ್ರಮಾಣ ಅನುಕ್ರಮವಾಗಿ ಕಡಿಮೆ ಮಾಡಲಾಗಿದೆ.

ಕೆ.ಜಿ.ಎಫ್. ಹಾಗೂ ಇತರೆ ಅನೌಪಚಾರಿಕ ಪಡಿತರ ಪ್ರದೇಶಗಳಿಗೆ ನೀಡಲಾಗುತ್ತಿರುವ ಪ್ರಮಾಣ ಗ್ರಾಮಾಂತರ ಮತ್ತು ಇತರ ಪಟ್ಟಣ ಪ್ರದೇಶಗಳಿಗೆ ನೀಡುತ್ತಿರುವ ಪ್ರಮಾಣಕ್ಕಿಂಥ ಹೆಚ್ಚಾಗಿರುತ್ತದೆ. ರಾಜ್ಯ ಸರ್ಕಾರವು ಅನೌಪಚಾರಿಕ ಪಡಿತರ ಪ್ರದೇಶಗಳಿಗೆ ಬೆಂಗಳೂರು ಹಾಗೂ ಕೆ.ಜಿ.ಎಫ್. ಸಹ ಸೇರಿದಂತೆ ಹೆಚ್ಚಿನ ಪ್ರಮಾಣದ ಹಂಚಿಕೆಯನ್ನು ಗ್ರಾಮಾಂತರ ಹಾಗೂ ಪಟ್ಟಣ ಪ್ರದೇಶಗಳಿಗಿಂತ ಹಿಂದಿನಿಂದಲೂ ಮಾಡಿಕೊಂಡು ಬರಲಾಗುತ್ತಿದೆ.

ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶದಲ್ಲಿ ಅಕ್ಕಿಯನ್ನು ಪ್ರತಿ ಯೂನಿಟ್ಟಿಗೆ ೧ ೭೫ ಕೆ.ಜಿ. ಯಂತೆ ಗರಿಷ್ಠ ಪ್ರತಿ ಕಾರ್ಡಿಗೆ ೨೫ ಕೆ.ಜಿ. ಯಂತೆ ನೀಡಲಾಗುತ್ತಿತ್ತು. ಹಾಗೆಯೇ ಗೋಧಿಯನ್ನು ಕೇಳಿದಷ್ಟು ಪ್ರಮಾಣದಲ್ಲಿ ನೀಡಲಾಗುತ್ತಿತ್ತು. ತದನಂತರ ಗರಿಷ್ಠ ೨೫ ಕೆ.ಜಿ.ಗೆ ನಿಗಧಿಗೊಳಿಸಲಾಗಿತ್ತು. ಇದನ್ನು ದಿನಾಂಕ ೧-೬-೧೯೮೮ ರಿಂದ ಪ್ರತಿ ಯೂನಿಟ್ಟಿಗೆ ೧-೨೫ ಕೆ.ಜಿ, ಯಂತೆ ಪ್ರತಿ ಕಾರ್ಡಿಗೆ ಗರಿಷ್ಠ ೧೭½ ಕೆ.ಜಿ.ಗೆ ವೈಜ್ಞಾನಿಕವಾಗಿ ನಿಗದಿಪಡಿಸಲಾಗಿದೆ. ಹಾಗೂ ಗೋಧಿಯ ಗರಿಷ್ಠ ಪ್ರಮಾಣವನ್ನು ಪ್ರತಿ ಕಾರ್ಡಿಗೆ ೨೫ ಕೆ.ಜಿ. ಯಂತೆ ನಿಗಧಿಪಡಿಸಲಾಗಿದೆ.

ಕೆ.ಜಿ.ಎಫ್.ನಲ್ಲಿ ಪ್ರತಿ ಕಾರ್ಡುದಾರರಿಗೆ ಅಕ್ಕಿಯನ್ನು ೧೦ ರಿಂದ ೧೨ ಕೆ.ಜಿ. ಮತ್ತು ಗೋಧಿಯನ್ನು ಪ್ರತಿ ಕಾರ್ಡಿಗ ೫ ಕೆ.ಜಿ. ಯಂತೆ ಲಭ್ಯಕ್ಕೆ ಅನುಗುಣವಾಗಿ ನೀಡಲಾಗುತ್ತಿದೆ.

ಕೇಂದ್ರ ಸರ್ಕಾರವು ನೀಡುತ್ತಿರುವ ಆಹಾರ ಧಾನ್ಯಗಳ ಪ್ರಮಾಣದಲ್ಲಿ ಕಡಿತ ಮಾಡಿರುವುದರಿಂದ ಬೆಂಗಳೂರು ನಗರ, ಕೆ ಜಿ.ಎಫ್. ಮತ್ತು ಇತರ ಅನೌಪಚಾರಿಕ ಪಡಿತರ ಪ್ರದೇಶಗಳಿಗೆ ಹಾಗೂ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶಗಳಿಗೆ ಅದಕ್ಕನುಗುಣವಾಗಿ ಹಂಚಿಕೆಯನ್ನು ಕಡಿಮೆ ಮಾಡಲಾಗಿದೆ. ಆದ್ದರಿಂದ ಕೆ ಜಿ.ಎಫ್ ಗೆ ಮಾತ್ರ ಕಡಿಮೆ ಮಾಡಿದೆ ಎಂದು ಹೇಳುವುದು ಸರಿಯಲ್ಲ.

ಕೇಂದ್ರ ಸರ್ಕಾರವು ನೀಡುತ್ತಿರುವ ಪ್ರಮಾಣದಲ್ಲಿ ಕಡಿತ ಮಾಡಿರುವುದನ್ನು ರಾಜ್ಯ ಸರ್ಕಾರವು ಗಂಭೀರವಾಗಿ ಪರಿಗಣಿಸಿ ರಾಜ್ಯಕ್ಕೆ ಬೇಕಾಗುವಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ನೀಡುವಂತೆ ಒತ್ತಾಯಿಸಲಾಗಿದೆ. ಹಾಗೂ ಎಲ್ಲಾ ಪ್ರಯತ್ನಗಳನ್ನು ಸಹ ಮಾಡಲಾಗುತ್ತಿದೆ.

ಶ್ರೀ ಆರ್. ವೆಂಕಟರಾಮಯ್ಯ —ಮಾನ್ಯ ಅಧ್ಯಕ್ಷರೆ. ಬೆಂಗಳೂರು ನಗರದಲ್ಲಿ ೨೫ ಕೆ.ಜಿ. ಅಕ್ಕಿಯನ್ನು ಕೊಡುತ್ತಿದ್ದುದನ್ನು ೧೭ ಕೆ.ಜಿ ಗೆ. ಇಳಿಸಿದ್ದೀರಿ. ೨೫ ಕೆ.ಜಿ. ಗೋಧಿಯನ್ನು ಮಾಡಿದ್ದೇವೆಂದು ಹೇಳುತ್ತಿದ್ದೀರಿ ಕೆ.ಜಿ.ಎಫ್.ನಲ್ಲಿ ೨ ದೊಡ್ಡ ಕಾರ್ಖಾನೆಗಳಿವೆ. ಬಿ.ಇ ಎಂ.ಎಲ್. ಮತ್ತು ಬಿ.ಹೆಚ್.ಇ.ಎಲ್. ಇವೇ ಆ ಎರಡು ದೊಡ್ಡ ಕಾರ್ಖಾನೆಗಳು. ಈ ಪ್ರದೇಶದಲ್ಲಿರತಕ್ಕ ಇದರ ಕಾರ್ಮಿಕರು ಪೂರ್ತಿಯಾಗಿ ಅವರ ಸಂಬಂಧದಮೇಲೆಯೇ ತಮ್ಮ ಜೀವನವನ್ನು ನಡೆಸುವವರು. ತಾವು ಕೊಡತಕ್ಕ ಅಕ್ಕಿಯನ್ನು, ಸಕ್ಕರೆಯನ್ನು ಕಡಿಮೆ ಮಾಡಿದರೆ ಅವರು ಯಾವರೀತಿ ತಮ್ಮ ಜೀವನವನ್ನು ಮಾಡಬೇಕೆಂಬುದನ್ನು ತಾವೇ ಯೋಜನೆ ಮಾಡಿ. ದಯವಿಟ್ಟು ಮೊದಲು ಎಷ್ಟು ಕೊಡುತ್ತಿದ್ದಿರೋ ಅಷ್ಟನ್ನೇ ಕೊಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಏಕೆಂದರೆ ಈ ಕಾರ್ಮಿಕರ ಪರಿಸ್ಥಿತಿ ತುಂಬಾ ಬಿಗಡಾಯಿಸುತ್ತದೆ. ಅವರಿಗೆ ಬರತಕ್ಕ ಸಂಬಳದಲ್ಲಿ ನೀವು ಕೊಡತಕ್ಕ ರೇಷನ್‌ಗೆ ಅವರು ಆಡ್ಜಸ್ಟ್ ಆಗಿದ್ದರು. ಅಂಗಡಿಗಳಲ್ಲಿ ರೇಷನ್ ತರಬೇಕಾದರೆ ಹೆಚ್ಚಿಗೆ ಬೆಲೆಯನ್ನು ಕೊಟ್ಟು ತರಬೇಕಾಗುತ್ತದೆ ನಿಮ್ಮ ರೇಷನ್ ಬೆಲೆಗೂ, ಅಂಗಡಿಗಳಲ್ಲಿ ತರುವುದಕ್ಕೂ ಬಹಳ ವ್ಯತ್ಯಾಸ ಇದೆ. ಆದ್ದರಿಂದ ತಮ್ಮ ಆಜ್ಞೆಯನ್ನು ರಿವೈಸ್ ಮಾಡಿ ಮೊದಲು ಕೊಡುತ್ತಿದ್ದಂತೆ ಬೆಂಗಳೂರು ಮತ್ತು ಕೆ.ಜಿ.ಎಫ್. ಎರಡೂ ಪ್ರದೇಶಗಳಲ್ಲೂ ಒಂದೇರೀತಿ ಕೊಡುವಂತೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಕೆ.ಜಿ.ಎಫ್.ನಲ್ಲಿ ಇರತಕ್ಕ ನಮ್ಮ ರೇಷನಿಂಗ್ ಆಫೀಸರರವರ ಕಕ್ಷೆಯಲ್ಲಿ ಬರತಕ್ಕ ಪ್ರದೇಶವನ್ನು ೩ ವಿಭಾಗ ಮಾಡಿ ಹಂಚಲಾಗಿದೆ. ಮೊದಲನೆಯದು ರಾಬರ್ಟ್‌ಸನ್‌ಪೇಟೆ, ಎರಡನೆಯದು ಬಿ.ಇ.ಎಂ.ಎಲ್. ಮತ್ತು ಬಿ.ಹೆಚ್.ಇ.ಎಲ್. ಹೀಗೆ ೩ ಭಾಗ ಮಾಡಿ ಹಂಚುತ್ತಿದ್ದಾರೆ. ಈ ಕಾರ್ಖಾನೆಗಳು ಇರತಕ್ಕ ಜಾಗದಲ್ಲಿ ಅಂದರೆ ಕಾರ್ಮಿಕರು ಇರತಕ್ಕ ಜಾಗದಲ್ಲಿ ನಾವೇನೂ ಕಡಿಮೆ ಮಾಡಿಲ್ಲ. ಆದರೆ ರಾಬರ್ಟ್‌ಸನ್ ಪೇಟೆಯಲ್ಲಿರತಕ್ಕ ಜನರಿಗೆ ಮಾತ್ರ ಸ್ವಲ್ಪಮಟ್ಟಿಗೆ ತೊಂದರೆಯಾಗುತ್ತದೆಂಬುದನ್ನು ತಮಗೆ ಹೇಳಬಯಸುತ್ತೇನೆ. ತಮಗೇ ಗೊತ್ತಿರುವಂತೆ ಬೆಂಗಳೂರಿನವರಿಗಿಂತಲೂ ಹೆಚ್ಚಿಗೆ ಆಹಾರ ಧಾನ್ಯಗಳ ವ್ಯವಸ್ಥೆ ಅವರಿಗೆ ಇದೆ ಅಲ್ಲಿ ಏನಾದರೂ ವ್ಯತ್ಯಾಸ ಮಾಡುವುದಕ್ಕೆ ಹೋದರೆ ಅದನ್ನು ಕಡಿಮೆ ಮಾಡುವುದಕ್ಕೆ ಹೋಗಬಾರದೆಂದು ಹೇಳುತ್ತೀರಿ. ತಾವು ಸಹಕಾರ ಮಾಡಿದರೆ ಈ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ನಾನು ತಮಗೆ ಏತಕ್ಕೆ ಹೇಳುತ್ತಿದ್ದೇನೆಂದರೆ ಉದಾಹರಣೆಗೆ ಹೇಳುವುದಾದರೆ ರಾಬರ್ಟ್‌ಸನ್ ಪೇಟೆಯಲ್ಲಿ ೧೧ ಸಾವಿರ ಕುಟುಂಬಗಳಿದ್ದರೆ ೧೮,೮೦೦ ಕಾರ್ಡುಗಳಿವೆ. ಅಂದರೆ ಸುಮಾರು ೮ ಸಾವಿರ ಬೋಗಸ್ ಕಾರ್ಡ್ ಗಳಿವೆಯೆಂದು ನಮ್ಮ ಗಮನಕ್ಕೆ ಬಂದಿದೆ. ಇದೇರೀತಿ ಇಡೀ ರಾಜ್ಯದಲ್ಲಿ ಬೋಗಸ್ ಕಾರ್ಡುಗಳ ಸಂಖ್ಯೆ ಜಾಸ್ತಿ ಇದೆ. ಆದ್ದರಿಂದ ಬೋಗಸ್ ಕಾರ್ಡುಗಳನ್ನು ಪತ್ತೆ ಹಚ್ಚತಕ್ಕ ವ್ಯಾಪಕ ಕಾರ್ಯವನ್ನು ಇಡೀ ರಾಜ್ಯದಾದ್ಯಂತ ತೀವ್ರತರವಾಗಿ ಕೈಗೊಂಡಿದ್ದೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಬಿ. ಹೆಚ್. ಇ. ಎಲ್. ಮತ್ತು ಬಿ. ಇ. ಎಂ. ಎಲ್. ಕಾರ್ಖಾನೆಗಳು ಇರತಕ್ಕ ಪ್ರದೇಶದಲ್ಲಿ ಪೂರ್ತಿಯಾಗಿ ಕಾರ್ಮಿಕರೇ ಇದ್ದಾರೆ. ರಾಬರ್ಟ್‌ಸನ್ ಪೇಟೆಯಲ್ಲಿ ೫೦ ಪರ್ಸೆಂಟ್ ಕಾರ್ಮಿಕರಿದ್ದಾರೆ, ನೀವು ಕೊಡತಕ್ಕ ರೇಷನ್ ರಿಸ್ಟ್ರಿಕ್ಟ್ ಮಾಡಿದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ತಾವು ಬೋಗಸ್ ಕಾರ್ಡುಗಳನ್ನು ಹಿಡಿಯುವುದಾದರೆ ಅದಕ್ಕೆ

ನಮ್ಮ ಅಬ್ಜೆಕ್ಷನ್ ಇಲ್ಲ. ಆದರೆ ಜೆನ್ಯುಯಿಸ್ ಕಾರ್ಡುಗಳಿಗೆ ರೇಷನ್ ಕೊಡತಕ್ಕದ್ದು ಮಾತ್ರ ಕಡಿಮೆ ಮಾಡಬೇಡಿ. ಅವರಿಗೆ ಕೊಡತಕ್ಕ ರೇಷನ್‌ನಲ್ಲಿ ಕಡಿಮೆ ಆದರೆ ಅವರು ಸತ್ಯಾಗ್ರಹ, ಸ್ಟ್ರೈಕ್ ಮುಂತಾದುವನ್ನು ಮಾಡುತ್ತಾರೆ.

ಶ್ರೀ ಬಸವರಾಜ ಪಾಟೀಲ್ ಅನ್ವರಿ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲಿಸುತ್ತೇನೆ.

ನಿಯಮ ೩೩ಳಿ ರ ಮೇರೆಗೆ

ಹುಬ್ಬಳ್ಳಿಯ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಸಂದರ್ಶಕ ಸಮಿತಿಯನ್ನು ಹಾಗೂ ಸಿಬ್ಬಂದಿಯನ್ನು ನೇಮಿಸುವುದು.

ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿ ಹಿಂದೆ ಒಂದು ಕಾಲದಲ್ಲಿ ಪ್ರತಿನಿಧಿಯನ್ನು ಪಡೆದಿದ್ದು ಹುಬ್ಬಳ್ಳಿ ನಗರವು ಏಕೆಂದರೆ ಕರ್ನಾಟಕ ವೈದ್ಯಕೀಯ ಮಹಾ ವಿದ್ಯಾಲಯವು ಹೆಸರು ತಂದುಕೊಟ್ಟಿತ್ತು, ಹುಬ್ಬಳ್ಳಿಯ ಘನತೆಯನ್ನು ಹೆಚ್ಚಿಸಲು. ಆದರೆ ಇದೇ ವೈದ್ಯಕೀಯ ಮಹಾ ವಿದ್ಯಾಲಯದ ಸಂದರ್ಶಕ ಸಮಿತಿಯನ್ನು ರಚಿಸಲಿಲ್ಲ. ಸರ್ಕಾರ ಈವರೆಗೆ ಜನತೆಯ ಆಶೋತ್ತರಕ್ಕೆ ತಕ್ಕಂತೆ ಬೆಳೆಯಲು, ಎಂ, ಎಂ. ಸಿ. ದವಾಖಾನೆಯ ಗುಣಮಟ್ಟ ಕಾಯ್ದುಕೊಂಡು ಹೋಗಲು. ಜನ ಪ್ರತಿನಿಧಿಗಳ ಸಮಿತಿಯ ಅವಶ್ಯಕತೆಯು ಇರುವುದು ಸರ್ಕಾರದ ಗಮನಕ್ಕೆ ಬರಲಿಲ್ಲವೆ ?

ಸಮಾಜಕ್ಕೆ ಉತ್ತಮ ವೈದ್ಯರಂಗಳನ್ನು ರೂಪಿಸಿ ನೀಡಬೇಕಾದ ಮಹಾ ವಿದ್ಯಾಲಯದಲ್ಲಿ ಅನೇಕ ವಿಷಯ ಪರಿಣತ ತಜ್ಞರಾದ ಪ್ರೊಫೆಸರ್‌ಗಳ ಕೊರತೆ ಇರುವುದು ಕಂಡು ಬಂದರೂ ಅನೇಕ ವರ್ಷಗಳಿಂದ ತುಂಬಲಿಲ್ಲ. ಇದರಿಂದಾದ ವಿದ್ಯಾರ್ಥಿಗಳ ವಿಷಯ ಜ್ಞಾನಕ್ಕೆ ಆಗುವ ಕಂದರದ ತೊಂದರೆಯನ್ನು ಸರಿಪಡಿಸುವುದು ಸಾಧ್ಯವೆ ?

ಇಂದಿನ ಅವಶ್ಯಕತೆಗಳಿಗೆ ತಕ್ಕಂತೆ ವೈದ್ಯಕೀಯ ವಿಜ್ಞಾನ ಬೆಳೆದಂತೆ ಯಂತ್ರೋಪಕರಣಗಳನ್ನು ಪೂರೈಸಲಾಗಿದೆಯೆ, ಹೇಗೆ ?

ಅನೇಕ ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ ಕಾರ್ಯಮಾಡದೆ ಇರುವುದರಿಂದಲೂ ಹಾಗೂ ಅವಶ್ಯಕವಾದ ಸಿಬ್ಬಂದಿ ಇಲ್ಲದೇ ಇರುವುದರಿಂದ ಸಾರ್ವಜನಿಕರ ಅನೇಕ ದೂರುಗಳು ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೂ ಅದರ ಅವಶ್ಯಕತೆಗಳನ್ನು ಪೂರೈಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿರುವುದು ? ಇದಕ್ಕೆ ಸನ್ಮಾನ್ಯ ಆರೋಗ್ಯ ಸಚಿವರು ಉತ್ತರಿಸುವರೆ ಹೇಗೇ?

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಆರೋಗ್ಯ ಸಚಿವರ ಪರವಾಗಿ) —ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಹಾ ವಿದ್ಯಾಲಯ ಆಸ್ಪತ್ರೆ, ಹುಬ್ಬಳ್ಳಿ, ಅದಕ್ಕೆ ಸಂದರ್ಶಕರ ಸಮಿತಿಯನ್ನು ರಚಿಸುವುದರ ಬಗ್ಗೆ ಸರ್ಕಾರವು ಪರಿಶೀಲಿಸಲಾಗುತ್ತಿದೆ.

ಕರ್ನಾಟಕ ವೈದ್ಯಕೀಯ ಮಹಾ ವಿದ್ಯಾಲಯ, ಹುಬ್ಬಳ್ಳಿ ಆದರಲ್ಲಿ ವಿವಿಧ ವಿಭಾಗದ ವಿಷಯ ಪರಿಣತರ (ಪ್ರಾಧ್ಯಾಪಕರುಗಳು) ಪರಿಸ್ಥಿತಿ ಈ ರೀತಿ ಇದೆ.

ಮಂಜೂರಾತಿಯಾದ ಹುದ್ದೆಗಳು	೪೯
ಭರ್ತಿಯಾದ ಹುದ್ದೆಗಳು	೩೪
ಖಾಲಿ ಇರುವ ಹುದ್ದೆಗಳು	೧೫

ಪ್ರಾಧ್ಯಾಪಕರ ಪರಿಸ್ಥಿತಿಯನ್ನು ಪರಿಶೀಲಿಸಲಾಗಿ ವಿದ್ಯಾರ್ಥಿಗಳ ವಿಷಯ ಜ್ಞಾನಕ್ಕೆ ತೊಂದರೆಯಾಗುವಂಥ ಪರಿಸ್ಥಿತಿ ಏನೂ ಕಂಡು ಬರುತ್ತಿಲ್ಲ. ಈಗ ಖಾಲಿ ಇರುವ ಪ್ರಾಧ್ಯಾಪಕರ ಹುದ್ದೆಗಳನ್ನು